ಕೊಟ್ಟನು. ಆ ಹುಡುಗರು ಬೀರಬಲ್ಲನು ಹೇಳಿದಂತೆ ಮಾಡಿದರು. ಆ ಪಂಡಿತನ ಮಗನು ಹುಡುಗರನ್ನು ಬಡಿಯಲಿಕ್ಕೆ ಹೋದನು. ಹುಡುಗರು ಕುಚೇಷ್ಟೆಗೆಂದು ಅದೇ ರೀತಿ ಪಂಡಿತನೆಂದು ಹೇಳಿ ತಮ್ಮ ತಮ್ಮ ಮನೆ ಕಡೆ ಹೋಗುತ್ತಿದ್ದರು. ಮುಂದೆ ಆ ಪಂಡಿತನ ಮಗನು ಆ ಹುಡುಗರನ್ನು ಬಡಿಯದಿದ್ದರೂ ಹಾಗೂ ಕೋಪಿಸಿಕೊಳ್ಳದಿದ್ದರೂ ಆ ಹುಡುಗರು, ಪಂಡಿತನೆಂದು ಕರೆಯಹತ್ತಿದರು. ಮುಂದೆ ಊರಿನ ಜನರೆಲ್ಲಾ ಪಂಡಿತನೆಂದು ಕರೆಯ ಹತ್ತಿದ್ದರಿಂದ ಅವನನ್ನು 'ಪಂಡಿತ', 'ಪಂಡಿತ' ಎಂಬ ಹೆಸರು ಸೇರಿಕೊಂಡಿತು. ಬೀರಬಲ್ಲನ ಉಪಾಯದಿಂದ ಅವನು ಅಕ್ಷರ ಕಲಿಯದಿದ್ದರೂ 'ಪಂಡಿತ' ನೆನಿಸಿಕೊಂಡನು.

ಬೀರಬಲ್ಲನ ಬುದ್ಧಿವಂತಿಕೆಯ ಈ ಸುದ್ದಿಯನ್ನು ತಿಳಿದುಕೊಂಡ ಒಬ್ಬ ಹತ್ತು ವರ್ಷದ ಬಾಲಕನು ತಾನು ಹರೆಯದ ಮನುಷ್ಯರಂತೆ ಮುಖದ ಮೇಲೆ ಮೀಸೆ ಬರಿಸಿಕೊಳ್ಳಬೇಕೆಂದು ಇಚ್ಛಿಸಿದನು. ಅವನು ಒಂದು ದಿನ ಬೀರಬಲ್ಲನ ಹತ್ತಿರ ಹೋಗಿ, ತಾವು ನನ್ನ ಮುಖದ ಮೇಲೆ ಮೀಸೆ ಬರುವಂತೆ ಮಾಡಿರಿ. ನಿಮಗೆ ಪುಣ್ಯ ಬರುತ್ತದೆ! ಎಂದನು. ಈ ಮಾತನ್ನು ಕೇಳಿ ಬೀರಬಲ್ಲನು ನಕ್ಕು 'ಹುಚ್ಚಾ! ನಿನಗೆ ಇನ್ನು ಎಂಟತ್ತು ವರ್ಷಗಳಾದ ಮೇಲೆ ತಾವಾಗಿಯೇ ಮುಖದ ಮೇಲೆ ಮೀಸೆ ಬರುತ್ತವೆ. ಈಗ ಮೀಸೆ ಬರಿಸಲು ನನ್ನಿಂದ ಸಾಧ್ಯವಿಲ್ಲ' ಎಂದನು.

ಆಗ ಆ ಬಾಲಕನು 'ತಾವು ದಯವಿಟ್ಟು ಸಾಧ್ಯವಿಲ್ಲೆಂದು ಹೇಳಬೇಡಿರಿ. ನಿಮ್ಮಿಂದ ಇದು ಖಂಡಿತವಾಗಿ ಸಾಧ್ಯವಾಗುತ್ತದೆ. ಏನೂ ಕಲಿಯದ ಮನುಷ್ಯನನ್ನು ಪಂಡಿತನನ್ನಾಗಿ ಮಾಡಿರುವಿರಿ. ನನ್ನ ಮುಖದ ಮೇಲೆ ಮೀಸೆ ಬರಿಸುವುದು ನಿಮಗೆ ಇದು ಯಾವ ಅಸಾಧ್ಯದ ಕೆಲಸ' ಎಂದು ಬೀರಬಲ್ಲನಿಗೆ ದೈನ್ಯದಿಂದ ಬೇಡಿಕೊಂಡನು. ಆಗ ಬೀರಬಲ್ಲನು ನಸುನಗುತ್ತಾ 'ನೋಡು ನಾನು ಹೇಳಿದಂತೆ ಮಾಡು. ನಾಳೆ ನಿನ್ನ ಮುಖದ ಮೇಲೆ ಮೀಸೆ ಕಾಣಿಸಿಕೊಳ್ಳುತ್ತದೆ. ಇಂದು ರಾತ್ರಿ ಮಲಗುವ ಮುನ್ನ ನಿನ್ನ ಮೂಗಿನ ಕೆಳಗೆ ಮೇಲು ತುಟಿಯ ಸ್ಥಳದಲ್ಲಿ ಜೇನು ತುಪ್ಪವನ್ನು ಸವರಿಕೋ, ಹಾಸಿಗೆಯ ಮೇಲೆ ಮಲಗಿದಾಗ ಯಾವ ವಸ್ತ್ರ, ಚಾದರವನ್ನು ಹೊದ್ದುಕೊಳ್ಳಬೇಡ. ಮುಂಜಾನೆ ಎದ್ದಕೂಡಲೇ ಕನ್ನಡಿಯಲ್ಲಿ ನಿನ್ನ ಮುಖವನ್ನು ನೋಡಿಕೋ. ಆಗ ನಿನ್ನ ಮುಖದ ಮೇಲೆ ಮೀಸೆ ಬಂದಿದ್ದು ಕಾಣಿಸುತ್ತದೆ' ಎಂದನು. ಈ ಮಾತನ್ನು ಕೇಳಿ ಆ ಬಾಲಕನು ಸಂತೋಷದಿಂದ ಕುಣಿದಾಡುತ್ತಾ ತನ್ನ ಮನೆಗೆ ಹೋದನು. ಆ ಬಾಲಕನು ಬೀರಬಲ್ಲನು ಹೇಳಿದಂತೆ ಅಂದು ರಾತ್ರಿ ಮಲಗುವ ಮುನ್ನ ತನ್ನ ಮುಖದ ಮೂಗಿನ ಕೆಳಗೆ ಮೀಸೆ ಬರುವ ಜಾಗೆಯಲ್ಲಿ ಜೇನುತುಪ್ಪವನ್ನು ಸವರಿಕೊಂಡು ಬರಿ ಹಾಸಿಗೆಯ ಮೇಲೆ ಏನನ್ನೂ ಹೊದ್ದುಕೊಳ್ಳದೇ ಮಲಗಿಕೊಂಡನು. ಮುಂಜಾನೆ ಬೇಗನೆ ಎದ್ದು ಕನ್ನಡಿಯನ್ನು ತೆಗೆದುಕೊಂಡು ನೋಡಿದಾಗ ಅವನಿಗೆ ಆನಂದಾಶ್ಚರ್ಯವಾಯಿತು. ಮುಖದಲ್ಲಿ ಮೀಸೆ ಕಾಣಿಸಿಕೊಂಡಿದೆಯೆಂದು ಅದರ ಮೇಲೆ ಕೈಯಾಡಿಸಿದಾಗ ಇರುವೆಗಳು ಮುಖದ ಮೇಲೆ ಹರಿದಾಡಿದವು. ಅವನ ಮೀಸೆಯ ಆಸೆ ಕ್ಷಣಕಾಲ ಫಲಿಸಿತು.

**-ಬಸವರಾಜ ಹೂಗಾರ, ಹುನಗುಂದ**



# ಅಳು ಬಿಡಲಿಲ್ಲ ಮೋಡ!

ತಲೆಮೇಲೆ ಇರುವುದು ಆಕಾಶ
ಆಕಾಶವೆಂದರೆ ಬರಿ ಬಯಲು ಆಲಯ
ಆ ಬಯಲಿನ ಅಂಗಳದಲ್ಲಿ ಮೋಡ
ಆ ಕಡೆ, ಈ ಕಡೆ ಓಡಾಡುತ್ತ ಕೂಡ

ಕಗ್ಗೆಗೆ, ಬೆಳ್ಳಗೆ ಮೋಡ ಓಡಾಡುತ್ತೆ ಸುಮ್ಮೆ
ಯಾರೋ ಏನೋ ಯಾಕೋ ಬೈದರು
ಮೋಡಕ್ಕೆ
ಗುಡ್ಡ–ಬೆಟ್ಟ ದಾಟಿ ದೂರ ದೂರ ಓಡಿದವು
ಓಡಿ–ಓಡಿ ಅವುಗಳ ಕಾಲು ನೋಯ್ದವು

ಹಿಂಡಿಂಡಾಗಿ ಓಡುವ ಮೋಡಕ್ಕೆ
ಬಂದಿರಬೇಕು ನೋಡು ಸಿಟ್ಟು– ಸೆಡವು
ಸಿಟ್ಟಿನಿಂದಲಿ ಒಂದಕ್ಕೊಂದು ಡಿಕ್ಕಿ
ಕೂಡಲೇ ಒಡಲಿಂದುದುರಿತು ಬರಿ ನೀರು

ಮೋಡದ ನೀರು ಬಿದ್ದಿತು ಭೂಮಿಗೆ
ಅಳುವುದನ್ನು ಬಿಡಲಿಲ್ಲ ನೋಡು ಮೋಡ
ಯಾರು ಬಯ್ದರೆಂಬುದು ಗೊತ್ತೇ ಇಲ್ಲ
ಅಳುವುದನಂತೂ ಬಿಡಲೇ ಇಲ್ಲ

ಅಳು ಹೆಚ್ಚಾದಂತೆ ಮಳೆ ಹೆಚ್ಚಾಯ್ತು
ಮಳೆ ಹೆಚ್ಚಾಗಿ ಕೆರೆ– ಕಟ್ಟೆ ತುಂಬಿದವು
ಮೋಡ ಅತ್ತರೆ ಭೂಮಿತಾಯಿಗೆ ಹಸಿರು
ಭೂಮಿ–ತಾಯಿ ಹಸಿರಾದರೆ ಜಗಕೆ ಉಸಿರು

ಅತ್ತು ಅತ್ತು ಮೋಡಕೆ ಸುಸ್ತಾಯಿತು
ಕಪ್ಪನೆ ಮೋಡ ಕರಗಿ ಬೆಳ್ಳಗಾಯಿತು
ಮೋಡದ ಕಣ್ಣು ಕೂಡ ಸ್ವಚ್ಛವಾಯಿತು
ಜಗದ ಹೊಲ– ನೆಲ ತಾನೆ ನಲಿಯಿತು.

**-ಚಂದ್ರಕಾಂತ ಕರದಳ್ಳಿ, ಶಹಾಪುರ**

**ನಿಮಗೆಷ್ಟು ಗೊತ್ತು**

## ಬಿಲ ತೋಡುವ ಗಣಿಗಾರಲು



ಇತರೆ ಹಕ್ಕಿಗಳಂತೆ ಇವುಗಳಿಗೆ ಮರದ ಮೇಲೆ ಗೂಡು ನಿರ್ಮಿಸುವ ಅಭ್ಯಾಸವಿಲ್ಲ. ನದಿಗಳ ತೀರಗಳ ದಂಡೆಯಲ್ಲಿ ಭೂಮಿಗೆ ಸಮಾನಾಂತರವಾಗಿ ರಂಧ್ರ ಕೊರೆದು ಬಿಲದ ರೂಪದ ಗೂಡು ಮಾಡುತ್ತವೆ. ಕೆಲವೊಮ್ಮೆ ಸಾಮೂಹಿಕವಾಗಿ ಅನೇಕ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ. ಸ್ವಲ್ಪ ಸಡಿಲವಾದ ಮಣ್ಣು ಅಥವಾ ಮರಳು ಮಿಶ್ರಿತ ಮಣ್ಣಿನ ಕಡಿದಾದ ಭೂಭಾಗದಲ್ಲಿ ಬಿಲದ ಗೂಡನ್ನು ಸಿದ್ಧಪಡಿಸುತ್ತವೆ. ಗಣಿಗಾರಲು ಹಕ್ಕಿಯ ಬಿಲ ಒಂದು ಮೀಟರ್‌ನಷ್ಟು ಉದ್ದವಿದ್ದು, ಹಕ್ಕಿಯು ಬಿಲದ ತುದಿಯಲ್ಲಿ ಮೊಟ್ಟೆಯಿಡುವ ಕೋಣೆಯನ್ನು ಹೊಂದಿರುತ್ತದೆ. ಮರಿಗಳು ದೊಡ್ಡವಾಗುವ ತನಕ ಅವುಗಳನ್ನು ಬಿಲದಲ್ಲಿಯೇ ಪೋಷಣೆ ಮಾಡುತ್ತವೆ.

**ಪ.ನಾ.ಹಳ್ಳಿ ಹರೀಶ್ ಕುಮಾರ್**